ಕಥೆ, ಕವನ, ಲೇಖನವೆನ್ನುತ್ತಾ ಸಾಹಿತ್ಯದ ಗುಂಗಿನಲ್ಲಿರುವವರು ನಾಗರೇಖಾ ಗಾಂವಕರ ದಾಂಡೇಲಿಯ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಉಪನ್ಯಾಸಕಿ. ಅವರ ಹುಟ್ಟೂರು ಅಡ್ಲೂರು ಗ್ರಾಮ. ಇಂಗ್ಲಿಷ್ ಸಾಹಿತ್ಯ ಅಧ್ಯಯನ ಮಾಡಿರುವ ಅವರಿಗೆ ಓದುವುದು ಮತ್ತು ಅನುವಾದದಲ್ಲಿ ತೊಡಗಿಕೊಳ್ಳುವದೆಂದರೆ ಇಷ್ಟ.

ಸಿಟ್ಟಿನಿಂದ ಸೇಮು ಮುಡಿಗೆ ಕೈಹಾಕಿದ್ದಳು. ಇಬ್ಬರೂ ಜಟ್ಟಿಗಳಂತೆ ಹೊಡೆದಾಡಿಕೊಳ್ಳುತ್ತಾ ಗದ್ದೆ ಬಯಲಿಗೆ ಬಿದ್ದರು. ಸೀರೆಗಳು ಎಷ್ಟು ಮೇಲೇರಿದವೋ?ಸೆರಗು ಎಷ್ಟು ಜಾರಿತೋ ಇಬ್ಬರಿಗೂ ಎಚ್ಚರವಿರಲಿಲ್ಲ. ನಿನ್ನೆ ಬಿದ್ದ ಮಳೆಗೆ ಕೆಸರಿನಂತಾದ ಗದ್ದೆಯ ಮಣ್ಣು ಮುಖಮೂತಿಗೆ ಮೆತ್ತಿಕೊಳ್ಳುತ್ತಿದ್ದರೂ ಅವರಿಬ್ಬರೂ ಪರಸ್ಪರರ ಜುಟ್ಟು ಹಿಡಿದಿದ್ದ ಬಿಟ್ಟರಲಿಲ್ಲ.

ಇಂತಹ ಹಲವು ಪ್ರಸಂಗಗಳು ಅಲ್ಲಿ ಆಗಾಗ ನಡೆಯುತ್ತಿರುತ್ತವೆ. ಇಬ್ಬರೂ ಮೂವರು ಹೆಂಗಸರು ಗದ್ದೆಗಿಳಿದರೋ ಉಳಿದೆಲ್ಲರ ಮನೆ ಹಿತ್ತಲ ದಣಪೆಗಳು ಸಾಲು ಜನರಿಂದ ತುಂಬಿ ಯಾವುದೋ ಪ್ರದರ್ಶನ ನಡೆಯುತ್ತಿದೆ ಎನ್ನುವ ವಾತಾವರಣ ಸೃಷ್ಟಿಯಾಗುತ್ತದೆ. ಈ ಮಾತಿನ ಕೆಸರಾಟದಲ್ಲಿ ಯಾವುದ್ಯಾವುದೋ ಮನೆಯ ಪ್ರಸಂಗಗಳು, ಸಂಬಂಧಗಳು ಜಗಜ್ಜಾಹೀರು ಆಗುವ ಲಕ್ಷಣ ಕಾಣುತ್ತಲೇ ಗಂಡಸರು ಎಚ್ಚರಗೊಂಡು ತಮ್ಮ ತಮ್ಮ ಹೆಂಗಸರನ್ನು ಒಳಗೆಳೆದುಕೊಂಡು ಬರುತ್ತಾರೆ. ಹೀಗೆಲ್ಲ ಬೈದಾಡಿಕೊಂಡ ಈ ಮನಸ್ಸುಗಳ ವೈಮನಸ್ಸು ಎರಡೇ ದಿನ ಅಷ್ಟೇ. ಮೂರನೆ ದಿನ ಊರಿನ ಹಬ್ಬ ಹರಿದಿನಗಳೊ, ಜಾತ್ರೆಯೊ, ಯಾರದೋ ಮನೆಯ ಸಣ್ಣಪುಟ್ಟ ಸಮಾರಂಭಗಳೊ, ಯಾರಿಗೋ ಮೈ ಹುಷಾರಿಲ್ಲದ ಕಾರಣವೋ ಸೇರಿ ಮತ್ತೆ ಜೊತೆಯಾಗಿ ಸಾಗುವ ಉದಾರ ಮನಸ್ಸುಗಳು ಅವರದು. ಖುಷಿ ದಿನವಾದರೆ ಕಿಲಕಿಲ ನಗುತ್ತಾ, ಸಂಕಟದ ದಿನವಾದರೆ ಇಳಿದನಿಯಲ್ಲಿ ಒಬ್ಬರಿಗೊಬ್ಬರು ಸಮಾಧಾನಿಸಿಕೊಳ್ಳುತ್ತಾ ಜೊತೆಯಾಗುತ್ತಾರೆ ಆ ಹೆಣ್ಣುಗಳು.

ಆವತ್ತು ಹಾಗೆ, ವಾರದ ಹಿಂದೆ ಶಾಲು ಮೀರಾಳನ್ನು ಕೆಣಕಿದ್ದಳು. ಗೋಧಿ ಬಣ್ಣದ ಮೀರಾ ಲಕ್ಷಣವಾಗಿದ್ದಳು. ತೌರಿಗೆ ಹೋದವಳು ವಾಪಸ್ಸು ಬರುವಾಗ ನಡು ಮಧ್ಯಾಹ್ನದ ಹೊತ್ತು. ಮಳೆಗಾಲವಾದರೂ ವಾರದಿಂದ ಮಳೆರಾಯ ನಾಪತ್ತೆಯಾಗಿದ್ದ. ಮಳೆಬಿಸಿಲು ಗಾಢವಾಗಿತ್ತು. ಬಾವಿಕಟ್ಟೆ ಮೇಲೆ ಬಟ್ಟೆ ತೊಳೆಯಲು, ಸ್ನಾನಕ್ಕೆ ನೀರು ತುಂಬಲು ಹೆಂಗಸರು ನೆರೆದಿದ್ದರು. ಅಂಗಡಿಬೈಲಲ್ಲಿ ಬಸ್ಸಿಳಿದು, ಮೂರು ಫರ್ಲಾಂಗ್ ನಡೆದರೂ ಖುಷಿಯಿಂದ ಬರುತ್ತಿದ್ದ ಮೀರಾ ಚಂದ ಕಾಣುತ್ತಿರುವುದನ್ನು ನೋಡಿ ಶಾಲೂಗೆ ತಡೆಯಲಾಗಿರಲಿಲ್ಲ. ‘ನಮ್ಮಂಗಿ ಮನೀಲೇ ಬಿದ್ದಕಂಡ್ರಿ ಮುದ್ಕಿರೇ ಆಗೋತಿವೆನ್ವೇ? ತರ್ಗತಿರರ್ಗೆ ಅಲ್ಲಿ ಇಲ್ಲಿ ಉಂಡಿ, ಬಣ್ಣಾ ಬತ್ತಿದು. ಮತ್ತೀಗೇ ಕರಿ ಕಲ್ಲೂನ ಬಿಳಿ ಮಾಡು ಸ್ನೋಪೌಡರು ಬಂದಿವಕಡ್ನೇ...’ ಎನ್ನುತ್ತಾ ಮೀರಾಗೆ ಅಣಕಿಸಿದ್ದಳು. ನಡೆದು ಬಸವಳಿದಿದ್ದ ಮೀರಾ ಉಕ್ಕಿ ಬರುತ್ತಿರುವ ಕೋಪವನ್ನು ನಿಯಂತ್ರಿಸಿಕೊಂಡಳು. ಆದರೂ ಒಂದು ಬಾಣ ಎಸೆಯುವುದನ್ನು ಮರೆಯಲಿಲ್ಲ. ‘ನನ್ನ ಎಂಜಲು ತಿನ್ನದಿದ್ರೆ ಇವ್ರಗೆ ನಿದ್ರಿನೇ ಬರುದಿಲ್ಲ ಖಂಡಾ, ಪಾಪ!. ತಿಂದ್ಕಂಡರೂ ಹೊಟ್ಟೆ ತುಂಬ್ಕಣ್ಲೇ..’ಎಂದವಳು ‘ಈಗ ಬಂದ್ಯನೇ ಮೀರಾ’? ಎಂದು ಪ್ರೀತಿಯಿಂದ ಮಾತಾಡಿಸಿದ ತುಕ್ಕಜ್ಜನ ಹೆಂಡ್ತಿಗೆ, ‘ಹೌದೇ, ಮಾಣವ್ವಿ, ಬಿಸಲಲ್ಲಿ ನಡ್ಕಂಡಿ ಬರೋಕೆ ಆಕಲ್ಲಾ, ಸಾಕಾಗಿದು. ಬತ್ತೀ ನಾನು. ನಿಲ್ಲುದಿಲ್ಲಾ ಈಗೇ’ ಎನ್ನುತ್ತಾ ಹೊರಟುಹೋಗಿದ್ದಳು.

ಹದಿನೈದು ದಿನಗಳವರೆಗೆ ಮೋಡಗಳೇ ಕುಸಿದು ಬಿದ್ದಂತೆ ಬಿದ್ದ ಮಳೆ ಏಕಾಏಕಿ ನಾಪತ್ತೆ ಆಗಿತ್ತು. ಹೀಗಾಗಿ ರಣಬಿಸಿಲು ವಾರದಿಂದ ಏರುತ್ತಲೇ ಇತ್ತು. ಮಳೆಬಂದರೆ ಸಾಕೆಂದು ಗದ್ದೆ ನಾಟಿ ಮಾಡಿ ಕೂತವರು ಬೇಡಿಕೊಳ್ಳುತ್ತಿದ್ದರು. ಅಕಾಲಕ್ಕೆ ಬಿದ್ದ ಬಿಸಿಲಿನ ಉರಿಗೆ ಶಾಲುಗೆ ಎದೆಯ ಕೆಳಗೆ ಬೆವರಿನ ಕಾರಣವೋ, ರವಿಕೆಯ ಬಟ್ಟೆ ಚುಚ್ಚುತ್ತಿದ್ದ ಕಾರಣವೊ ಕಜ್ಜಿ ಹತ್ತಿದಂತಾಗಿ ಎರಡು ದಿನಕ್ಕೆ ನೀರು ಒಸರತೊಡಗಿತು. ನಿಧಾನಕ್ಕೆ ಕಜ್ಜಿ ಒಂದು ಸುತ್ತು ಹಬ್ಬತೊಡಗಿತು. ಹೆದರಿ ಅದನ್ನು ಗಂಡನಿಗೆ ತೋರಿಸಿದಳು. ‘ಸರ್ಪ ಸುತ್ತು ಕಂಡಂಗಾತಿದು, ಯಾರಿಗಾರೂ ಕೇಳು’ ಅಂದ.